ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	213
ಸದಸ್ಯರ ಹೆಸರು	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	14-12-2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಗಣಿ ಮತ್ತು ಭೂವಿಜ್ಞಾನ ಇಲಾಖೆಯ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳು ಯಾವುವು; ಅವುಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳು ಎಷ್ಟು; ಕೊರತೆಯಿರುವ ಹುದ್ದೆಗಳು ಎಷ್ಟು; (ಜಿಲ್ಲಾವಾರು, ಹುದ್ದೆವಾರು ವಿವರ ನೀಡುವುದು);	ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಒಟ್ಟಾರೆಯಾಗಿ 34 ಜಿಲ್ಲೆ ಕಛೇರಿಗಳನ್ನು ಹೊಂದಿದ್ದು, 31 ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳು 02 ವಲಯವಾರು ಕಛೇರಿಗಳು, 02 ದಕ್ಷಿಣವಲಯ ಜಂಟಿ ನಿರ್ದೇಶಕರು, ಮೈಸೂರು ಹಾಗೂ ಹೆಚ್ಚುವರಿ ನಿರ್ದೇಶಕರು, ಉತ್ತರವಲಯ ಹಾಗೂ ಕೇಂದ್ರ ಕಛೇರಿ ಸೇರಿದಂತೆ ಒಟ್ಟಾರೆಯಾಗಿ 34 ಕಛೇರಿಗಳನ್ನು ಹೊಂದಿದೆ. ಜಿಲ್ಲಾವಾರು ಹುದ್ದೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವೇತನ ಪಾವತಿಗೆ ತಗಲುವ ವಾರ್ಷಿಕ ಮೊತ್ತವೆಷ್ಟು; ಪ್ರಯಾಣ ಭತ್ಯೆ, ಪ್ರಭಾರ ಭತ್ಯೆಯಂತಹ ವೇತನೇತರ ಪಾವತಿಗೆ ತಗಲುವ ವೆಚ್ಚವೆಷ್ಟು; ಇತರ ಕಛೇರಿ ವೆಚ್ಚವೆಷ್ಟು; (ವರ್ಷವಾರು, ಜಿಲ್ಲಾವಾರು, ವೆಚ್ಚವಾರು ಮಾಹಿತಿ ನೀಡುವುದು);	ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವೇತನ ಪಾವತಿಗೆ ತಗಲುವ ವಾರ್ಷಿಕ ಮೊತ್ತ, ವೇತನೇತರ ವೆಚ್ಚದ ವರ್ಷವಾರು ಹಾಗೂ ಜಿಲ್ಲಾವಾರು ಮಾಹಿತಿ **ಅನುಬಂಧ-2** ರಲ್ಲಿ ಪೂರೈಸಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ರಾಜಧನ, ದಂಡ ಮುಂತಾದ ಮೂಲಗಳಿಂದ ಸಂಗ್ರಹಿಸಲಾದ ಆದಾಯವೆಷ್ಟು; ಅಕ್ರಮ ಗಣಿಗಾರಿಕೆಯ ಕುರಿತು ದಾಖಲಾದ ಪ್ರಕರಣಗಳೆಷ್ಟು; ಸಿಬ್ಬಂದಿಯ ಕೊರತೆಯಿಂದ ಅಪಾರ ಪ್ರಮಾಣದಲ್ಲಿ ಆದಾಯ ಸೋರಿಕೆಯಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರದ ಕ್ರಮವೇನು?	ಕಳೆದ ಮೂರು ವರ್ಷಗಳಲ್ಲಿ ರಾಜಧನ, ದಂಡ ಮುಂತಾದ ಮೂಲಗಳಿಂದ ಸಂಗ್ರಹಿಸಲಾದ ಆದಾಯದ ವಿವರ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

ಕ್ರ. ಸಂ	ವರ್ಷ	ಆದಾಯ
1	**2018-19**	**3026.42**
2	**2019-20**	**3629.02**
3	**2020-21**	**3893.44**
4	**2021-22** (ಅಕ್ಟೋಬರ್ 2021 ರವರೆಗೆ	**3652.81**
	ಒಟ್ಟು	**14201.69**